# ಶ್ರೀಮಾತೆಯವರ ವ್ಯಕ್ತಿತ್ವದ ಮಹತ್ವ

ಷಂಷಾದ್ ಬೇಗಮ್

*ಆಧ್ಯಾತ್ಮಿಕ ಜೀವನದ ಬಗ್ಗೆ ಆಳವಾದ ಅರಿವುಳ್ಳ ಶ್ರೀಮತಿ ಷಂಷಾದ್ ಬೇಗಮ್ ಅವರು ದಾವಣಗೆರೆಯಲ್ಲಿ ವಾಸಿಸುತ್ತಿರುವ ಓರ್ವ ಮುಸ್ಲಿಂ ಗೃಹಿಣಿ. ಯಾವುದೇ ಮತೀಯ ಚೌಕಟ್ಟಿಗೆ ಒಳಪಡದ ಆಧ್ಯಾತ್ಮಿಕ ಸಾಧನೆ ಮತ್ತು ಅನುಭವಗಳ ಪಕ್ವತೆಯಿಂದ ಮೂಡಿ ಬಂದ ಈ ಲೇಖನದಲ್ಲಿ ಶ್ರೀಮತಿ ಬೇಗಮ್ ತಾವು ಕಂಡಂತೆ ಶ್ರೀಮಾತೆಯವರ ಮಹತ್ವವನ್ನು ವಿಶದಪಡಿಸಿದ್ದಾರೆ.*



ಶ್ರೀಮಾತೆ ಶಾರದಾದೇವಿಯವರ ವ್ಯಕ್ತಿತ್ವ ಮಹತ್ವಪೂರ್ಣವಾದುದು. ಆದರೆ ಆ ಮಹತ್ವ ಅದ್ಭುತ, ರೋಮಾಂಚಕ, ಸಾಹಸಮಯ ಘಟನೆಗಳಿಗೆ ಸಂಬಂಧಿಸಿದುದಲ್ಲ. ಅದು ನಿತ್ಯ ಜೀವನದ ಸಾಂಸಾರಿಕ, ಸಾಮಾಜಿಕ ಮತ್ತು ಮಾನವೀಯ ಘಟನೆಗಳಿಗೆ ಸಂಬಂಧಿಸಿದುದು. ಸಾಂಸಾರಿಕ ಕರ್ಮಮಯ ಜೀವನದಲ್ಲಿ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಉಳಿಸಿಕೊಂಡು ಹೇಗೆ ನಾವು ನೆಮ್ಮದಿಯ ಜೀವನವನ್ನು ನಡೆಸಬಹುದು ಎಂಬುದನ್ನು ಶ್ರೀಮಾತೆಯವರು ತೋರಿಸಿಕೊಟ್ಟಿದ್ದಾರೆ. ಶ್ರೀಮಾತೆಯವರ ಆಧ್ಯಾತ್ಮಿಕ ವ್ಯಕ್ತಿತ್ವ ಅವರ ಪ್ರತಿಯೊಂದು ಚಲನವಲನದಲ್ಲಿ ನಡೆನುಡಿಯಲ್ಲಿ ಹಾಸುಹೊಕ್ಕಾಗಿತ್ತು.

ಆಧ್ಯಾತ್ಮಿಕ ವ್ಯಕ್ತಿತ್ವದಲ್ಲಿ ಎದ್ದುಕಾಣುವ ಅಂಶವೆಂದರೆ ಸಚ್ಚಾರಿತ್ರ್ಯ. ಶೀಲಸಂಪನ್ನತೆಯೇ ಪ್ರಧಾನವಾಗಿರುವ ಜೀವನ ಅದು. ಸತ್ಯಪ್ರಿಯತೆ, ಅಹಿಂಸಾಪಾಲನೆ, ಪ್ರೀತಿ, ಕರುಣೆ, ದಯೆ, ಕ್ಷಮೆ, ನಿಃಸ್ವಾರ್ಥ ಸೇವೆ, ಕಷ್ಟಸಹಿಷ್ಣುತೆ, ಭಗವಂತನಲ್ಲಿ ಶರಣಾಗತಿ ಇತ್ಯಾದಿಗಳು ಜೀವಂತ ಶಕ್ತಿಯಾಗಿ ಕಂಗೊಳಿಸುತ್ತಿರುವುದನ್ನು ಶ್ರೀಮಾತೆಯವರ ಜೀವನದಲ್ಲಿ ಕಾಣಬಹುದು.

ಅವರ ಒಂದೊಂದು ಕೃತಿಯೂ, ಅದೆಷ್ಟೇ ಸಾಮಾನ್ಯವಾಗಿದ್ದರೂ, ಎಷ್ಟೊಂದು ಬೋಧಪ್ರದವಾಗಿದ್ದವು! ಒಮ್ಮೆ ಅವರ ದೊಡ್ಡಪ್ಪನ ಮಗ ಸೂರ್ಯನಾರಾಯಣ ಅವರೊಡನಿದ್ದ. ಅವರು ಕಲಕತ್ತದಿಂದ ಜಯರಾಂಬಾಟಿಗೆ ಹೋಗುವಾಗ, ವಿಷ್ಣುಪುರಕ್ಕೆ ಬಂದಾಗ ಅವನಿಗೆ ನೆನಪು ಬಂತು, ಆತ ಒಂದು ಮುಖ್ಯ ವಸ್ತುವನ್ನೇ ಬಿಟ್ಟು ಬಂದಿದ್ದ—ಅದಿಲ್ಲದೆ ಮನೆಗೆ ಹೋಗುವಂತೆಯೇ ಇರಲಿಲ್ಲ. ಕೂಡಲೆ ಕಲಕತ್ತಕ್ಕೆ ಟೆಲಿಗ್ರಾಂ ಕಳಿಸಲಾಯಿತು. ಆ ವಸ್ತು ಬರುವವರೆಗೂ ಸೂರ್ಯನಾರಾಯಣನು ಅಲ್ಲಿಯೇ ಇದ್ದು ಅದನ್ನು ತೆಗೆದುಕೊಂಡು ಬರಲಿ, ಉಳಿದವರು ಪ್ರಯಾಣ ಮುಂದುವರಿಸಬಹುದು ಎಂದು ಇತರರು ಸೂಚಿಸಿದಾಗ ಶ್ರೀಮಾತೆಯವರು ಅದಕ್ಕೊಪ್ಪಲೇ ಇಲ್ಲ. "ಸೂರ್ಯ ನಮ್ಮವನೇ ಅಲ್ವೆ?" ಎಂದು ಹೇಳಿ ನಿರಾಕರಿಸಿದರು.

ಶ್ರೀಮಾತೆಯವರಲ್ಲಿ ಸಂಕುಚಿತ ಜಾತೀಯತೆ ಇರಲಿಲ್ಲವೆನ್ನುವುದಕ್ಕೆ ಅಮಜಾದನೇ ಸಾಕ್ಷಿ. ಕಳ್ಳ ಎನಿಸಿಕೊಂಡವನನ್ನೂ ಪ್ರೀತಿಯಿಂದ ಶಿಷ್ಯನನ್ನಾಗಿ ಸ್ವೀಕರಿಸಿ, ಊಟ ಬಡಿಸಿ ಎಲೆಯನ್ನು ತೆಗೆದುಹಾಕುತ್ತಾರೆ. ಸಂನ್ಯಾಸಿ ಶಿಷ್ಯರನ್ನು ನಿರ್ದೇಶಿಸಿ ಹೇಳುತ್ತಾರೆ "ನೀವೆಲ್ಲಾ ಹೇಗೆ ನನ್ನ ಸಂತಾನವೋ ಅವನೂ ಕೂಡ ನನ್ನ ಮಗನಂತೆಯೇ" ಎಂದು. ಎಂತಹ ತಾಯ್ತನ ಶ್ರೀಮಾತೆಯವರಲ್ಲಿತ್ತು ! ಜಾತಿಯೇ ಮುಂತಾದ ಸಾಮಾಜಿಕ ಕಟ್ಟಳೆಗಳಿಗೆ ಅವರು ಒಳಪಟ್ಟಿದ್ದರೂ ಅವುಗಳಿಂದ ಅವರು ಬಂಧಿತರಾಗಿರಲಿಲ್ಲ, ಅವು ಅವರ ದೃಷ್ಟಿಯನ್ನು ಸಂಕುಚಿತಗೊಳಿಸಲಿಲ್ಲ. ಹಿರಿಮೆ ಎಲ್ಲಿಯಾದರೂ ಇರಲಿ ಅದನ್ನು ಗುರುತಿಸುವ ಸಾಮರ್ಥ್ಯ ಅವರದಾಗಿತ್ತು. ಸಾಮಾಜಿಕ ಸ್ಥಾನಮಾನಗಳಿರುವ ಸುಸಂಸ್ಕೃತರಾದ ಬ್ರಾಹ್ಮಣೇತರರನ್ನು ಗೌರವಿಸಲು ಅವರು ಎಂದೂ ಹಿಂಜರಿಯುತ್ತಿರಲಿಲ್ಲ. ಕವಿರಾಜ್ ಶ್ಯಾಮಾದಾಸ್ ವಾಚಸ್ಪತಿಯು ರಾಧುವನ್ನು ಪರೀಕ್ಷಿಸಲು ಉದ್ಬೋಧನಕ್ಕೆ ಬಂದಾಗ ಶ್ರೀಮಾತೆಯವರ ಸಲಹೆಯಂತೆ ರಾಧು ಅವರಿಗೆ ನಮಸ್ಕರಿಸಿದಳು. ವೈದ್ಯರು ಹೊರಟುಹೋದ ಮೇಲೆ ಅಲ್ಲಿದ್ದವರೊಬ್ಬರು, "ಅವರು ಬ್ರಾಹ್ಮಣರೇ?" ಎಂದು ಕೇಳಿದರು. "ಇಲ್ಲ, ಅವನು ವೈದ್ಯ (ಒಂದು ಬ್ರಾಹ್ಮಣೇತರ ಜಾತಿ)" ಎಂದರು ಶ್ರೀಮಾತೆಯವರು. "ಅವರಿಗೆ ಪ್ರಣಾಮ ಮಾಡಲು ರಾಧುವಿಗೆ ಏಕೆ ಹೇಳಿದಿರಿ?" ಎಂದು ಕೇಳಲು, "ಏಕೆ ಮಾಡಬಾರದು? ಎಂಥ ವಿದ್ವಾಂಸ! ಅಂಥವರು ಬ್ರಾಹ್ಮಣ ಸಮಾನರು" ಎಂದು ಹೇಳಿದರು.

> **ಸಾಮಾಜಿಕ ಪದ್ಧತಿಯೆ ಮುಂತಾದ ಅಲ್ಪ ವಿಷಯಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡ. ಅದು ನೀನು ಭಗವಂತನನ್ನು ಮರೆಯುವಂತೆ ಮಾಡುತ್ತದೆ. —*ಶ್ರೀಶಾರದಾದೇವಿ***

ಶ್ರೀಮಾತೆಯವರಲ್ಲಿ ಎಂತಹ ವೈರಾಗ್ಯವಿತ್ತು! ಅವರು ಶ್ರೀರಾಮಕೃಷ್ಣ ಪರಮಹಂಸರು ಗಂಟಲು ನೋವಿನಿಂದ ನರಳುತ್ತಾ ಇರುವುದನ್ನು ನೋಡಿ ಶಿವನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಾರೆ. ಉತ್ತರ ಸಿಗುವುದಿಲ್ಲ. ಮಾರನೆ ದಿನ ಧ್ಯಾನದಲ್ಲಿ ಮಡಕೆ ಒಡೆದ ಶಬ್ದ ಕೇಳಿಬರುತ್ತದೆ. ಆ ಕ್ಷಣ ಮಾತೆಯಲ್ಲಿ ತೀವ್ರವಾದ ವೈರಾಗ್ಯಭಾವ ಮೂಡಿಬಂದು, "ಎಲ್ಲಿಯ ಪತಿ, ಎಲ್ಲಿಯ ಸಂಸಾರ, ಎಲ್ಲಿಯ ಪ್ರಾಪಂಚಿಕತೆ" ಎಂದೆನಿಸುತ್ತವೆ. ಎಲ್ಲವೂ ಮರೆತುಹೋಗಿ ದಿವ್ಯಭಾವ ಮೂಡಿಬಂದು ಶಿವನನ್ನು ಧ್ಯಾನಿಸಿ ವಾಪಸ್ಸು ಮನೆಗೆ ಬರುತ್ತಾರೆ. ಆಗ ಶ್ರೀರಾಮಕೃಷ್ಣರು ಅವರನ್ನು ನೋಡಿ ಮೃದುವಾಗಿ ನಗುತ್ತಾರಂತೆ. ಈ ಮನುಷ್ಯದೇಹಕ್ಕೆ ಅಂಟಿಕೊಳ್ಳಬಾರದು, ಎಂದಿದ್ದರೂ ಒಂದು ದಿನ ಬಿದ್ದುಹೋಗುವ ದೇಹವಿದು, ಮಡಕೆಯ ಹಾಗೆ. ದೇಹಪ್ರಜ್ಞೆ ಮೀರಿದ ಉನ್ನತ ಆಧ್ಯಾತ್ಮಿಕ ಸ್ಥಿತಿಯಲ್ಲಿದ್ದ ಶ್ರೀರಾಮಕೃಷ್ಣರಿಗೆ ಖಾಯಿಲೆಯ ನೋವಿತ್ತೆ? ದೇಹದ ಅಣುಅಣುವಿನಲ್ಲೂ ಜಗನ್ಮಾತೆಯೇ ತುಂಬಿದ್ದಾಳೆ ಎನ್ನುವ ಪರಮಹಂಸರಲ್ಲಿ 'ನಾನು' ಎಂಬುದೆಲ್ಲಿತ್ತು? ತಮ್ಮ ದೇಹವನ್ನು ತೋರಿಸುತ್ತಾ "ಇದು ದಿಂಬಿಗೆ ಹಾಕಿರುವ ಚೀಲದಂತೆ" ಎಂದು ಭಕ್ತರಿಗೆ ಹೇಳುತ್ತಿದ್ದವರಿಗೆ ದೇಹಭಾವವಿತ್ತೆ? ಅವರು ದೇಹತ್ಯಜಿಸಿದಮೇಲೆ ಶ್ರೀಮಾತೆಯವರು ಒಮ್ಮೆ "ಅಮ್ಮಾ, ಕಾಳಿ ಎಲ್ಲಿ ಹೋದೆ" ಎಂದು ಕೂಗಿದಾಗ ಪರಮಹಂಸರು ಒಂದು ಬೆಳಕಿನ ಗೋಲವಾಗಿ "ಇದೋ ಇಲ್ಲಿದ್ದೇನೆ" ಎನ್ನುತ್ತಾರಂತೆ. ಅಣುರೇಣುತೃಣಕಾಷ್ಠದಲ್ಲೂ ತಮ್ಮನ್ನೇ ಕಂಡುಕೊಂಡ ಯೋಗಿಗಳ ನಿರ್ವಿಕಾರ ಸ್ಥಿತಿಯನ್ನು ವರ್ಣಿಸಲು ಸಾಧ್ಯವೇ? ಶ್ರೀಮಾತೆಯವರು ಹೇಳುತ್ತಾರೆ, "ಸುಟ್ಟರೆ ಹಿಡಿ ಬೂದಿಯಾಗುವ ಶರೀರ ಇದು. 'ನಾನು, ನನ್ನದು' ಮುಂತಾದ ಪ್ರಾಪಂಚಿಕತೆಯನ್ನು ಮರೆತು ಸಾಧನೆ ಮಾಡಿ ದೇವರನ್ನು ಪಡೆಯಿರಿ" ಎಂದು.

ತಮ್ಮ ಬಾಳೆಲ್ಲವನ್ನೂ ನಿಃಸ್ವಾರ್ಥಸೇವೆಯಲ್ಲೇ ಸವೆಸಿದವರು ಶ್ರೀಮಾತೆಯವರು. ಕಸ ಗುಡಿಸುವುದು, ರಂಗೋಲಿ ಹಾಕುವುದರಿಂದ ಹಿಡಿದು ತಮ್ಮನ್ನು ನೋಡಲು ಬಂದ ಭಕ್ತರಿಗೆಲ್ಲಾ ಅಡುಗೆ ಮಾಡುವವರೆಗೆ ಮನೆಯ ಪ್ರತಿಯೊಂದು ಕೆಲಸವನ್ನೂ ಮಾಡುತ್ತಿದ್ದರು. ಬೆಳಗಿನಿಂದ ರಾತ್ರಿಯವರೆಗೂ ಒಂದೇ ಸಮನೆ ದುಡಿತವಿದ್ದರೂ ಅವರು ಆಯಾಸಗೊಂಡಂತೆ ಕಾಣುತ್ತಿರಲಿಲ್ಲ. ಇದಕ್ಕೆ ಕಾರಣ ಅಲ್ಲಿ 'ನಾನು ಮಾಡುತ್ತಿದ್ದೇನೆ' ಎಂಬ ಭಾವ ಸಂಪೂರ್ಣ ಅಳಿಸಿಹೋಗಿತ್ತು. ದೇವರನ್ನು ಪಡೆದ ಆ ಸ್ಥಿತಿ, ಭಗವದ್ ಭಾವ, ಅಥವಾ ಬ್ರಾಹ್ಮೀಸ್ಥಿತಿಯಲ್ಲೇ ಎಲ್ಲ ಪ್ರಾಪಂಚಿಕ ಕೆಲಸಗಳನ್ನು ಮಾಡಿದ ಶ್ರೀಮಾತೆಯವರು ಆದರ್ಶ ಕರ್ಮಯೋಗಿಯಾಗಿದ್ದರು. ಕೆಲಸವನ್ನು ಮಾಡುತ್ತ ಮಾಡುತ್ತ ದೇವರನ್ನು ನೆನೆಯುತ್ತಿರಬೇಕು ಎನ್ನುವುದನ್ನು ತಮ್ಮ ಬದುಕಿನಿಂದ ತೋರಿಸಿಕೊಟ್ಟ ಪ್ರೇಮಮಯಿ ತಾಯಿ, ಒಂದು ಅದ್ಭುತ ಸ್ತ್ರೀಶಕ್ತಿ ಅವರು. ಶ್ರೀಮಾತೆಯವರ ಜೀವನದ ಅಧ್ಯಯನ ಯಾವುದೋ ಒಂದು ಕೋಮಿನವರಿಗೆ ಮಾತ್ರ ಸೀಮಿತವಾದುದಾಗಬಾರದು. ಸಮಸ್ತ ನಾರೀಕುಲಕ್ಕೆ ಆದರ್ಶಪ್ರಾಯರಾಗಿದ್ದರು ಶ್ರೀಮಾತೆಯವರು. ಹೆಣ್ಣು ಎಂದರೆ ಸರಳವಾದ ನಡೆ, ನುಡಿ, ಭಕ್ತಿ, ಜ್ಞಾನ, ಸೇವೆಗಳಿಗೆ ಮತ್ತೊಂದು ಹೆಸರು ಎಂಬುದನ್ನು ಪ್ರಪಂಚಕ್ಕೆ ತೋರಿಸಿ ಹೆಣ್ಣುಮಕ್ಕಳಿಗೆ ದಾರಿದೀಪವಾಗಿದ್ದಾರೆ.

ಶ್ರೀಮಾತೆಯವರು ಕೆಲಸದ ವಿಷಯದಲ್ಲಿ ಇದು ಮೇಲು ಅದು ಕೀಳು ಎಂಬ ತಾರತಮ್ಯವನ್ನು ಮಾಡಿದವರೇ ಅಲ್ಲ. ತಾವು ಬಯಸಿದ ಕೆಲಸವನ್ನು ಮಾತ್ರ ಮಾಡದೆ ಕೈಗೆ ಬಂದ ಕೆಲಸವನ್ನು ಸಂತೋಷದಿಂದ ಮಾಡುವ ಸ್ವಭಾವ ಅವರದು. ಜಯರಾಂಬಾಟಿಯಲ್ಲಂತೂ ಅವರಿಗೆ ಸ್ವಲ್ಪವೂ ಬಿಡುವಿರುತ್ತಿರಲಿಲ್ಲ. ಭಕ್ತರನ್ನು ನೋಡಿಕೊಳ್ಳುವುದು, ತರಕಾರಿ ಹೆಚ್ಚುವುದು, ಪೂಜೆಗೆ ಅಣಿಗೊಳಿಸುವುದು, ಪೂಜೆ ಮಾಡುವುದು, ಅನಂತರ ಪ್ರಸಾದ ವಿತರಣೆ, ಕೊನೆಯ ಪಕ್ಷ ನೂರು ಬೀಡಗಳನ್ನಾದರೂ ತಯಾರಿಸುವುದು, ಸಂಜೆ ಹಿಟ್ಟು ಕಲಸಿ ಚಪಾತಿ-ಪೂರಿ ಮಾಡುವುದು, ಹಾಲು ಕಾಯಿಸುವುದು, ದೀಪಗಳನ್ನೆಲ್ಲ ಒರಸಿ ಹಚ್ಚುವುದು—ಹೀಗೆ ಪ್ರತಿದಿನ ಅವರ ಕೆಲಸ ಅವ್ಯಾಹತವಾಗಿ ನಡೆದೇ ಇತ್ತು. ಬೇರೆಯವರಿದ್ದರೂ ಕೂಡ ಯಾರ ಸಹಾಯವನ್ನೂ ನಿರೀಕ್ಷಿಸುತ್ತಿರಲಿಲ್ಲ. ಅವರು ಹೇಳುತ್ತಿದ್ದರು, "ಶರೀರ ಒಂದು ಕಡೆ ಸೊರಗುತ್ತಿದೆ, ಇನ್ನೊಂದು ಕಡೆ ಕೆಲಸವೂ ವೃದ್ಧಿಯಾಗುತ್ತಿದೆ" ಎಂದು.

> **ಪ್ರತಿಯೊಂದಕ್ಕೂ ಅದಕ್ಕೆ ತಕ್ಕನಾದ ಗೌರವವನ್ನು ತೋರಿಸಬೇಕು. ಒಂದು ಕಸಪೊರಕೆಯನ್ನೂ ಗೌರವದಿಂದ ಕಾಣಬೇಕು. ಅತ್ಯಂತ ಸಾಮಾನ್ಯ ಕೆಲಸವನ್ನೂ ಪೂಜ್ಯಭಾವದಿಂದ ಮಾಡಬೇಕು. — *ಶ್ರೀಶಾರದಾದೇವಿ.***

ಅವರು ಕೊನೆಯ ಬಾರಿ ಜಯರಾಂಬಾಟಿಯಿಂದ ಕಲಕತ್ತೆಗೆ ಆಗಮಿಸುವುದಕ್ಕೆ ಮುಂಚೆ ಒಂದು ದಿನ ಶ್ರೀಮಾತೆಯವರು ಎಣ್ಣೆ ಹಚ್ಚಿಕೊಂಡು ಸ್ನಾನಕ್ಕೆ ಹೊರಟರು. ಆದರೆ ಕೊಳಕ್ಕೆ ಹೋಗದೆ ಬೇರೆಲ್ಲಿಗೊ ಹೊರಟುಹೋದರು, ಯಾರಿಗೂ ತಿಳಿಯಲೇ ಇಲ್ಲ. ಬಹಳ ಹುಡುಕಾಟ ನಡೆದಮೇಲೆ ಕೊನೆಗೆ ಶ್ರೀಮಾತೆಯವರು ದನದಕೊಟ್ಟಿಗೆಯ ಹಿಂಭಾಗದಲ್ಲಿ ಬೆರಣಿ ತಟ್ಟುತ್ತಿರುವುದನ್ನು ಯಾಮಿನೀದೇವಿ ಕಂಡುಹಿಡಿದಳು. ಇಷ್ಟೊಂದು ಜನರಿರುವಾಗ ಈ ದುರ್ಬಲ ಶರೀರದಲ್ಲಿ ಈ ಕಷ್ಟ ಏಕಪ್ಪ ಇವರಿಗೆ ಎಂದು ಯಾಮಿನೀದೇವಿ ದುಃಖವನ್ನು ವ್ಯಕ್ತಪಡಿಸಿದಾಗ ಅವರಂದರು, "ಅದರಿಂದೇನಂತೆ, ಎಲ್ಲ ಬೇರೆ ಬೇರೆ ಕೆಲಸದಲ್ಲಿದ್ದಾರೆ, ನಾನೇ ಮಾಡಿಬಿಡುತ್ತೇನೆ" ಎಂದು.

ಒಮ್ಮೆ **ರಾಮಕೃಷ್ಣಪುಂಥಿಯ** ಕರ್ತೃ ಅಕ್ಷಯಕುಮಾರಸೇನ್ ಒಬ್ಬ ಕೆಲಸದಾಕೆಯ ಮೂಲಕ ಜಯರಾಂಬಾಟಿಗೆ ತರಕಾರಿ

ಯನ್ನು ಕಳಿಸಿಕೊಟ್ಟನು. ಅವಳು ಬಂದಾಗ ಸಂಜೆಯಾಗಿದ್ದರಿಂದ ಶ್ರೀಮಾತೆಯವರ ಮನೆಯಲ್ಲೇ ರಾತ್ರಿ ತಂಗಿದಳು. ಆಕೆಗೆ ಮಲೇರಿಯಾ ಇದ್ದುದರಿಂದ ನಡುರಾತ್ರಿ ಭೀಷಣ ಜ್ವರ ವಾಂತಿ ಶುರುವಾಯಿತು. ಬೆಳಗಿನ ಜಾವ ಎಲ್ಲರೂ ಏಳುವುದಕ್ಕೆ ಮುಂಚೆಯೆ ಶ್ರೀಮಾತೆಯವರು ಆಕೆ ಮಲಗಿದ್ದ ಕೋಣೆಗೆ ಹೋದರು. ವಾಂತಿಯಿಂದ ಜಾಗವೆಲ್ಲ ಹೊಲಸಾಗಿತ್ತು. ಕೂಡಲೆ ಶ್ರೀಮಾತೆಯವರು ಅದನ್ನೆಲ್ಲ ತೆಗೆದು ಕೋಣೆಯನ್ನು ನೀರಿನಿಂದ ತೊಳೆದರು. ಇತರರು ಇಂಥ ಕೆಲಸ ಮಾಡಲು ಅಸಹ್ಯ ಪಡ ಬಹುದು, ಒಂದು ವೇಳೆ ಮಾಡಿದರೂ ಆ ಕೆಲಸದಾಕೆಯ ಮೇಲೆ ಬೈಗುಳ ಮಳೆಗರೆಯುತ್ತಿದ್ದರು. ಇದನ್ನೆಲ್ಲ ಯೋಚಿಸಿಯೆ ಶ್ರೀಮಾತೆಯವರು ಬೆಳಕು ಹರಿಯುವುದಕ್ಕೆ ಮುಂಚೆಯೇ ಎಲ್ಲ ವನ್ನೂ ಸ್ವಚ್ಛಗೊಳಿಸಿದರು.

ಶ್ರೀಮಾತೆಯವರು ಸರಳತೆಯನ್ನು ಮೆಚ್ಚುವವರು, ಆಡಂಬ ರದ ಜೀವನ ಅವರ ಮನಸ್ಸಿಗೆ ಒಪ್ಪದು. ಒಮ್ಮೆ ಒಬ್ಬ ಮಹಿಳಾ ಭಕ್ತೆ ಬಂದು "ಅಮ್ಮ, ನನ್ನ ಪತಿ ತಿಂಗಳಿಂದ ಹಾಸಿಗೆ ಹಿಡಿದಿದ್ದಾರೆ, ಅವರಿಗೆ ಹುಷಾರಾಗುವಂತೆ ಆಶೀರ್ವದಿಸಿ" ಎಂದು ಕೇಳುತ್ತಾಳೆ. ಆಗ ಶ್ರೀಮಾತೆಯವರು ಅವಳನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಮೈತುಂಬಾ ಒಡವೆತೊಟ್ಟು, ತುಂಬ ಬೆಲೆ ಬಾಳುವ ಸೀರೆಯುಟ್ಟು ಬಂದಿದ್ದ ಆಕೆಯನ್ನು ಆಶೀರ್ವದಿಸಿ ಕಳುಹಿಸಿದ ಮೇಲೆ ಅಲ್ಲಿದ್ದ ಭಕ್ತರನ್ನುದ್ದೇಶಿಸಿ ಹೇಳುತ್ತಾರಂತೆ, "ಅಂಥ ವಿಪತ್ತು, ಠಾಕುರರ ಸಂನಿಧಿಗೆ ಬಂದಿದ್ದಾಳೆ. ಎಲ್ಲ ವನ್ನೂ ಬಿಟ್ಟು ಕಣ್ಣೀರ ಕಾಣಿಕೆಯನ್ನೀಯಬೇಕು. ಅದಿಲ್ಲ, ನೋಡು ಆ ಬೆಡಗು ಬಿನ್ನಾಣವನ್ನು! ದೇವರ ಸಂನಿಧಿಗೆ ಈ ರೀತಿ ಬರುವುದೆ? ಈಗೆಲ್ಲ ಹೀಗೆಯೇ!" ಸರಳತೆಯೇ ಮೂರ್ತಿ ವೆತ್ತಂತೆ ಇದ್ದ ಶ್ರೀಮಾತೆಯವರು ತಮ್ಮದೇ ಹುಟ್ಟುಹಬ್ಬದಲ್ಲಿ ಯಾವ ರೀತಿಯ ಆಡಂಬರವಿಲ್ಲದೆ ಮನೆಯಲ್ಲಿ ಖಾಯಿಲೆ ಮಲಗಿದ್ದ ಬಂಧುವೊಬ್ಬರಿಗೆ ಗಂಜಿ ತಯಾರು ಮಾಡುತ್ತಾ ಕುಳಿತಿರುತ್ತಾರಂತೆ.

ಪ್ರತಿಯೊಬ್ಬ ಭಕ್ತರಿಗೂ "ಠಾಕೂರರನ್ನು ಪ್ರಾರ್ಥಿಸಿ, ಅವ ರಲ್ಲಿ ಶರಣಾಗಿ" ಇದು ಪ್ರತಿನಿತ್ಯ ಅಮ್ಮನ ಹೇಳಿಕೆ. ಪವಿತ್ರ ಭಾವನೆ ಅಮ್ಮನಲ್ಲಿ ಎಷ್ಟಿತ್ತು ಎನ್ನುವುದಕ್ಕೆ ಒಂದು ಉದಾ ಹರಣೆ: ಬಂಧುವೊಬ್ಬಳು ರಾತ್ರಿ ತಣ್ಣೀರು ಸ್ನಾನ ಮಾಡಿ ಮಡಿ ಯಾಗಲು ಛಳಿ ಎಂದು ಹೇಳಿದಾಗ ಶ್ರೀಮಾತೆಯವರು "ನನ್ನನ್ನು ಮುಟ್ಟು ಸಾಕು" ಎನ್ನುತ್ತಾರಂತೆ. ಕೇವಲ ಸ್ಪರ್ಶದಿಂದ ಪವಿತ್ರರನ್ನಾಗಿಸುವ ಶಕ್ತಿ ಶ್ರೀಶಾರದಾಮಾತೆಯವರಲ್ಲಿತ್ತು. ಅಕ್ಕ ಮಹಾದೇವಿ ಹೇಳುತ್ತಾಳೆ, "ನಡೆ ಶುದ್ಧ, ನುಡಿ ಶುದ್ಧ, ಭಾವ ಶುದ್ಧವಿರುವವರ ನನಗೆ ತೋರಿಸಿ ಚೆನ್ನ ಮಲ್ಲಿಕಾರ್ಜುನ" ಎಂದು. ಅಂತಹ ಶುದ್ಧತೆ ಮಾತೆಯವರಲ್ಲಿತ್ತು. ಅಕ್ಕ ಮುಂದು ವರಿದು ಹೇಳುತ್ತಾಳೆ, "ತನು ಕರಗದವರಿಂದ ಪುಷ್ಪವನೊಲ್ಲೆ ಯಯ್ಯಾ ನೀನು, ಮನ ಕರಗದವರಿಂದ ಗಂಧಾಕ್ಷತೆಯನೊಲ್ಲೆ ಯಯ್ಯಾ ನೀನು" ಎಂದು. ಅಂತಹ ಪರಿಶುದ್ಧ ಅಂತರಂಗ ವನ್ನು ಶ್ರೀಮಾತೆಯವರು ಹೊಂದಿದ್ದರು. ಅರಿಷಡ್ ವರ್ಗಗಳ ಗಂಧವೇ ಇಲ್ಲದ ಮನಸ್ಥಿತಿ ಪಡೆದವರು ತಾವೇ ತಾವಾಗಿ ದೈವತ್ವಕ್ಕೆ ಏರುತ್ತಾರೆ, ದೈವೀಗುಣಗಳ ಆಗರವಾಗುತ್ತಾರೆ, ಎಲ್ಲರಿಂದಲೂ ಪೂಜಿಸಲ್ಪಡುತ್ತಾರೆ.

ಶ್ರೀಮಾತೆಯವರ ಜೀವನಮಹತ್ವವನ್ನು ಪ್ರತಿಬಿಂಬಿಸುವ, ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಪ್ರೇಮಾನಂದರ ಹೇಳಿಕೆಯೊಂದಿಗೆ ಈ ಲೇಖನವನ್ನು ಮುಗಿಸುತ್ತೇನೆ: "ಇಡೀ ಜಗನ್ನಾಟಕದ ಸೂತ್ರಧಾರಿಣಿಯಾದ ಜಗನ್ಮಾತೆ ಒಬ್ಬ ಸಾಮಾನ್ಯ ಬಡಹೆಂಗಸಿನ ರೂಪದಲ್ಲಿ ಬಂದು ನೆಲಕ್ಕೆ ಸಗಣಿ ಸಾರಿಸುವುದು, ಪಾತ್ರೆ ತಿಕ್ಕುವುದು, ಬತ್ತ ಕುಟ್ಟುವುದು, ಭಕ್ತರ ಎಂಜಲೆಲೆ ತೆಗೆಯುವುದು—ಈ ಬಗೆಯ ಕೆಲಸಕಾರ್ಯಗಳನ್ನೆಲ್ಲ ಮಾಡುತ್ತಿರುವುದನ್ನು ನೀವೆಲ್ಲ ನೋಡಿಯೇ ಇದ್ದೀರಿ. ಅವರು ಈ ರೀತಿ ಪರಿಶ್ರಮ ಪಡುತ್ತಿರುವುದು ಗೃಹಸ್ಥರಿಗೆ ಅವರ ಗೃಹಸ್ಥಧರ್ಮವನ್ನು ಕಲಿಸಿಕೊಡುವುದಕ್ಕಾಗಿ. ಎಂತಹ ಅಪರಿ ಮಿತ ಸಹನೆ, ಅಪಾರ ಕರುಣೆ! ಎಂಥ ನಿರಭಿಮಾನ!"

❖

ಒಂದು ದಿನ ಕಂಬಳಿ ಮಾರುವವಳೊಬ್ಬಳು ಉದ್ಬೋಧನಕ್ಕೆ ಬಂದಳು. ನಳಿನೀದೇವಿ ಒಂದು ಕಂಬಳಿ ಕೊಂಡುಕೊಳ್ಳಲು ಹೋದಳು. ಒಂದು ಕಂಬಳಿಗೆ ಒಂದು ರೂಪಾಯಿ ನಾಲ್ಕಾಣೆ ಕೇಳಿದಳು ಕಂಬಳಿಯವಳು. ನಳಿನಿ ಒಂದೇ ರೂಪಾಯಿ ಕೊಡುತ್ತೇನೆಂದು ಹೇಳಿದಳು. ಬಹಳ ಹೊತ್ತು ಚೌಕಾಸಿ ನಡೆಯಿತು. ಶ್ರೀಮಾತೆಯವರು ಇದನ್ನು ಕೇಳಿಸಿಕೊಂಡು ಬಂದು ನಳಿನಿಗೆ ಛೀಮಾರಿ ಹಾಕಿದರು :"ನೀನು ನಾಲ್ಕು ಆಣೆಗಾಗಿ ಇಷ್ಟೊಂದು ಚೌಕಾಸಿ ಮಾಡುತ್ತಿದ್ದೀಯಲ್ಲ, ಛೀ! ಆಕೆ ಎರಡು ಕಾಸಿಗಾಗಿ ಹೊರೆ ಹೊತ್ತುಕೊಂಡು ಮನೆಮನೆಗೂ ಅಲೆಯುತ್ತಾಳೆ. ನೀನು ನಾಲ್ಕಾಣೆಗಾಗಿ ಅವಳ ಸಮಯ ವನ್ನೆಲ್ಲ ಹಾಳುಮಾಡುತ್ತಿದ್ದೀಯಲ್ಲ! ಈಗ ನಿನಗೆ ಕಂಬಳಿಯ ಅವಶ್ಯಕತೆಯಾದರೂ ಏನು? ಎಲ್ಲ ಇದೆ ನಿನಗೆ, ಆದರೂ ಮತ್ತೂ ಬೇಕು. ಆ ನನ್ನ ಮಗಳಿಗೆ (ಅಲ್ಲಿಯೇ ಇದ್ದ ಕ್ಷೀರೋದ ಬಾಲಾಳಿಗೆ) ಒಂದು ಕೊಟ್ಟಿದ್ದರೆ ಚೆನ್ನಾಗಿತ್ತು. ಅವಳು ಕಂಬಳಿಯಲ್ಲದೆ ಮತ್ತೇನನ್ನೂ ಉಪಯೋಗಿಸುವುದಿಲ್ಲ. ಅದೂ ಒಂದೇ ಕಂಬಳಿ ಅವಳಿಗಿರುವುದು. ಈ ಶೀತ ಕಾಲದಲ್ಲೂ ಒಂದೇ ಕಂಬಳಿಯಲ್ಲೇ ಕಾಲ ತಳ್ಳುತ್ತಿದ್ದಾಳೆ. ಆದರೂ ಯಾರನ್ನೂ ಕೇಳುವುದಿಲ್ಲ." ಶ್ರೀಮಾತೆಯವರಿಗೆ ತನ್ನ ಬಗ್ಗೆ ಇಷ್ಟೆಲ್ಲ ಗೊತ್ತಿದೆಯಲ್ಲ ಎಂದು ಯೋಚಿಸುತ್ತ ಕ್ಷೀರೋದ ಬಾಲಾ ಕಣ್ಣೀರು ಸುರಿಸಿದಳು.

●